■ ವಿಶಾಖ ಎನ್.



# 'ತಿಂಡಿಗೇನು?' ಎಂದರು ಅನುಷ್ಕಾ

ಹೊಟ್ಟೆಗೇನು ತಿನ್ನಬೇಕೋ ಗೊತ್ತಾಗುತ್ತಿಲ್ಲ ಎಂದು ಮೊನ್ನೆ ಬೆಳ್ಳಂಬೆಳಗ್ಗೆ ಇನ್‌ಸ್ಟಾಗ್ರಾಂನಲ್ಲಿ ಅನುಷ್ಕಾ ಶರ್ಮ ಪೋಸ್ಟ್ ಮಾಡಿಬಿಟ್ಟರು. ನಿತ್ಯವೂ ಬೆಳಿಗ್ಗೆ ವ್ಯಾಯಾಮ ಮಾಡಿ ಫಿಟ್ ಆಗಿರುವ ಅವರು ಸಿನಿಮಾಗಳಲ್ಲಿ ನಟಿಸುವುದೇನೋ ಕಡಿಮೆಯಾಗಿದೆ. ನಿರ್ಮಾಪಕಿಯಾಗಿ ಮಾಡಬೇಕಾದ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ವಿರಾಟ್ ಕೊಹ್ಲಿ ಕ್ರಿಕೆಟ್ ಆಡಲು ಹೋಗುವ ಕಡೆಯಲ್ಲೆಲ್ಲ ಅವರೂ ಕಾಣಿಸಿಕೊಳ್ಳುವುದು ಮಾಮೂಲು. ಕೈಗೊಬ್ಬರು ಕಾಲಿಗೊಬ್ಬರು ಕೆಲಸಗಾರರನ್ನು ಇಟ್ಟುಕೊಂಡಿರುವ ಇಂತಹ ನಟಿಗೇ ಹೊಟ್ಟೆಗೇನು ತಿನ್ನಬೇಕು ಎನ್ನುವ ಗೊಂದಲ ಸೃಷ್ಟಿಯಾದರೆ ಓದುವವರಿಗೆ, ನೋಡುವವರಿಗೆ ಹೇಗನ್ನಿಸಬೇಡ?




ಫ್ಲೇಕ್ಸ್, ಪ್ಯಾನ್‌ಕೇಕ್, ಬಿರಿಯಾನಿ, ನೂಡಲ್ಸ್... ಈ ಪೈಕಿ ಏನು ತಿನ್ನಬೇಕು ಎಂದು ಅನುಷ್ಕಾ 'ಪೋಲ್' ಮಾಡಿದರು. ಇಂಥ ಸರಳವೆನ್ನಿಸುವುದಾದರೂ ಸಂಕೀರ್ಣವಾದ ಆಯ್ಕೆಗೆ ಅನೇಕರು ತಮಗೆ ತೋಚಿದಂತೆ ಪ್ರತಿಕ್ರಿಯಿಸಿದರು. ಇನ್ನು ಕೆಲವರು ಆರೋಗ್ಯಕರ ಡಯೆಟ್ ಯಾವುದೆಂದು ಉದ್ದುದ್ದ ಬರೆದು ಪೋಸ್ಟ್ ಮಾಡಿದರು.

ಎಲ್ಲರಿಗೂ ಬೆಳಿಗ್ಗೆ ಏನು ತಿಂಡಿ ಮಾಡಬೇಕೆನ್ನುವ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಅನುಷ್ಕಾ ಕೂಡ ಈ ವಿಷಯದಲ್ಲಿ ಎಲ್ಲರಂತೆಯೇ ಎಂದಾಯಿತು. ಡಯೆಟಿಷನ್‌ಗಳ ಸಲಹೆಯನ್ನು ಕಣ್ಣಿಗೊತ್ತಿಕೊಂಡು ಬದುಕುತ್ತಿರುವ ಸೆಲೆಬ್ರಿಟಿಗಳಿಗೂ ಇಂತಹ ಪ್ರಶ್ನೆ ಬರುತ್ತದಲ್ಲ, ಅದೇ ಸಂತಸದ ವಿಷಯ ಎಂದೂ ಕೆಲವರು ಅನುಷ್ಕಾ ಹಾಕಿರುವ ಪೋಲ್‌ಗೆ ಪ್ರತಿಕ್ರಿಯಿಸಿದ್ದಾರೆ.

'ನಾನು ವ್ಯಾಯಾಮ ಮಾಡುತ್ತಿರುವಾಗ ಇತ್ತೀಚಿನ ದಿನಗಳಲ್ಲಿ ಸದಾ ತಿಂಡಿಗೆ ಏನು ತಿನ್ನಬೇಕೆಂಬ ಪ್ರಶ್ನೆ ಗುಂಯ್‌ಗುಡುತ್ತಿತ್ತು. ಅದಕ್ಕೇ ಸುಮ್ಮನೆ ಮನಸ್ಸಿನಲ್ಲಿ ಅದನ್ನು ಇಟ್ಟುಕೊಂಡಿರುವುದು ಸರಿಯಲ್ಲ ಎಂದು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದೆ. ಕೆಲವರ ಸಲಹೆಗಳು ಆಸಕ್ತಿಕರವಾಗಿವೆ. ನನ್ನ ಪೋಸ್ಟ್‌ನಲ್ಲಿ ತಮಾಷೆಯ ಧ್ವನಿ ಇತ್ತಾದರೂ ಎಷ್ಟೋ ಜನ ಗಂಭೀರವಾಗಿಯೇ ಪರಿಗಣಿಸಿದ್ದಾರೆ. ಎಲ್ಲರೂ ಆರೋಗ್ಯಕ್ಕೆ ಈ ಕಾಲದಲ್ಲಿ ಎಷ್ಟು ಕಾಳಜಿ ವಹಿಸುತ್ತಿದ್ದೇವೆ ಎಂಬುದು ಕೂಡ ಇಂತಹ ಪೋಸ್ಟ್‌ಗಳಿಂದ ಜನಜನಿತವಾಗುತ್ತದೆ. ಯಾವುದು ಆರೋಗ್ಯಕರ ತಿಂಡಿ ಎಂಬ ಅಸಂಖ್ಯ ಸಲಹೆಗಳು ನನ್ನನ್ನು ಫಾಲೋ ಮಾಡುತ್ತಿರುವ ಎಲ್ಲರಿಗೂ ಸಿಕ್ಕಂತಾಗುತ್ತದೆ' ಎಂದು ಅನುಷ್ಕಾ ಪ್ರತಿಕ್ರಿಯಿಸಿದ್ದಾರೆ.

# ಎಲ್ಲೆಲ್ಲೂ ಶ್ರೀಲೀಲಾ

ಏಳು ವರ್ಷಗಳ ಹಿಂದೆ ಭುವನ್‌ಗೌಡ ತೆಗೆದಿದ್ದ ಫೋಟೊಗಳು ಸದ್ದು ಮಾಡಿದ್ದವು. 'ಉಗ್ರಂ', 'ಕೆಜಿಎಫ್ ಸರಣಿ' ಸಿನಿಮಾಗಳ ಛಾಯಾಚಿತ್ರಗ್ರಹಣದಿಂದ ಮನೆಮಾತಾಗಿರುವ ಭುವನ್‌ಗೌಡ ಆಗ ತೆಗೆದಿದ್ದುದು ಅಭಿನಯದ ಬಯಕೆ ಹೊತ್ತ ನಟಿ ಶ್ರೀಲೀಲಾ ಅವರ ಫೋಟೊಗಳನ್ನು. ಈಗ ಈ ನಟಿ ಸಾಲು ಸಾಲು ತೆಲುಗು ಚಿತ್ರಗಳಿಗೆ ಸಹಿ ಮಾಡಿದ್ದಾರೆ. ಮಹೇಶ್ ಬಾಬು ನಾಯಕರಾಗಿ ಅಭಿನಯಿಸುತ್ತಿರುವ 'ಗುಂಟೂರು ಕಾರಂ'ನಿಂದ ಶುರುವಾಗುವ ಯಾದಿ ಅಲ್ಲು ಅರ್ಜುನ್ ಅವರ ಹೊಸ ಚಿತ್ರದವರೆಗೆ ಮುಂದುವರಿದಿದೆ. ವಿಜಯ್ ದೇವರಕೊಂಡ, ಪವನ್ ಕಲ್ಯಾಣ್, ಬಾಲಕೃಷ್ಣ, ನವೀನ್ ಪೊಲಿಶೆಟ್ಟಿ... ಹೀಗೆ ಶ್ರೀಲೀಲಾ ಅಭಿನಯಿಸಲಿರುವ ಚಿತ್ರಗಳ ಸ್ಟಾರ್‌ಗಳ ಹೆಸರುಗಳೂ ಕಣ್ಣು ಕೋರೈಸುತ್ತಿವೆ.

2017ರಲ್ಲಿ 'ಕಿಸ್' ಕನ್ನಡ ಸಿನಿಮಾಗೆ ನಿರ್ದೇಶಕ ಎ.ಪಿ. ಅರ್ಜುನ್ ಆಯ್ಕೆ ಮಾಡಿದ್ದ ಹುಡುಗಿಯೇ ಈ ಶ್ರೀಲೀಲಾ. ಆಮೇಲೆ ಕನ್ನಡದ್ದೇ 'ಬೈ ಟೂ ಲವ್' ಚಲನಚಿತ್ರದಲ್ಲೂ ಅಭಿನಯಿಸಿದರು. ಅದಾದಮೇಲೆ 'ಪೆಳ್ಳಿ ಸಂದಾಡಿ' ಎಂಬ ತೆಲುಗು ಚಿತ್ರ ಸೋತಿತು. ಆದರೆ, ಅದರಲ್ಲಿನ ಅಭಿನಯದಿಂದ ಶ್ರೀಲೀಲಾ ಗುರುತಾದರು. ಕನ್ನಡದ 'ಭರಾಟೆ' ಈ ನಟಿ ಗಮನ ಸೆಳೆದಿದ್ದ ಇನ್ನೊಂದು ಸಿನಿಮಾ. ಶ್ರೀಲೀಲಾ ತಾಯಿ ಸ್ತ್ರೀರೋಗ ತಜ್ಞವೈದ್ಯೆ. ಅಮೆರಿಕದಲ್ಲಿ ಹುಟ್ಟಿದ ಮಗಳು ಬೆಂಗಳೂರಿನಲ್ಲಿ ಬೆಳೆಯಲು ಅವರ ವೃತ್ತಿಯೇ ಕಾರಣ.

ಮಗಳೂ ವೈದ್ಯೆ ಆಗಬೇಕೆನ್ನುವುದು ಅಮ್ಮನ ಕನಸಾಗಿತ್ತು. ಶ್ರೀಲೀಲಾ ಆ ಹಾದಿಯಲ್ಲಿಯೇ ಓದನ್ನು ಕೂಡ ಹಚ್ಚಿಕೊಂಡಿದ್ದರು. ಆದರೆ, ಅಭಿನಯದ ಚುಂಗು ಹಿಡಿದು ಅವರು ತಮ್ಮ ಮಾತೃಭಾಷೆ ತೆಲುಗಿನ ಕಡೆಗೆ ವಾಲಿದರು. 'ಧಮಾಕಾ' ತೆಲುಗು ಚಿತ್ರದ ಸಮಾಧಾನಕರ ಗಳಿಕೆ ಅವರಿಗೆ ಜೀವಾನಿಲವಾಗಿ ಒದಗಿಬಂತು. ರಶ್ಮಿಕಾ ಮಂದಣ್ಣ ಕನ್ನಡದ ಚಿಮ್ಮುಹಲಗೆಯಿಂದ ಅಲ್ಲಿಗೆ ಹಾರಿ ಯಶೋ ಅಧ್ಯಾಯ ಬರೆದದ್ದನ್ನು ನಾವು ಕಂಡಿದ್ದೇವೆ. ಈಗ ಶ್ರೀಲೀಲಾ ಸರದಿ. ■

